### ಅತ್ಯುತ್ತಮ ಪತ್ರಿಕೆ

'ಸುಧಾ' ನಮ್ಮ ಕಾಲದ ಅದ್ಭುತ ಪತ್ರಿಕೆ. ಇದರಲ್ಲಿ ಪ್ರಕಟವಾಗುವ ಪ್ರತಿಯೊಂದು ಲೇಖನವೂ ನನ್ನ ಬದುಕಿಗೆ ಹೊಸದೇನೋ ಮೌಲ್ಯವನ್ನು ನೀಡುತ್ತವೆ. ನನ್ನೆದುರು ಹೊಸದೊಂದು ಜಗತ್ತನ್ನು ತೆರೆಯುತ್ತವೆ. ಇಂಥದೊಂದು ಸಮಗ್ರ, ಸುಂದರ, ವರ್ಣಮಯ ಪತ್ರಿಕೆಯನ್ನು ನೀಡುತ್ತಿರುವುದಕ್ಕೆ ಥ್ಯಾಂಕ್ಸ್. ಈ ಭೂಮಿ ಇರುವವರೆಗೂ ನಿಮ್ಮ ಈ ಅದ್ಭುತ ಪ್ರಯಾಣವನ್ನು ಮುಂದುವರಿಸಿ ಎಂದು ಹಾರೈಸುತ್ತೇನೆ.

—ಲಿಂಗರಾಜ್ ಬಿ.ಎಂ.

### ಪದ್ಮಶ್ರೀ ಸುಕ್ರಜ್ಜಿ

ಹಾಲಕ್ಕಿ ಹಾಡುಗಳ ಕೋಗಿಲೆ ಎಂದೇ ಖ್ಯಾತಿಗಳಿಸಿ, ಕುಡಿತದ ವಿರುದ್ಧ ಆಂದೋಲನ ರೂಪಿಸಿ, ಸ್ತ್ರೀ ಶೋಷಣೆ ವಿರುದ್ಧ ಹೋರಾಟ ನಡೆಸಿ ತನ್ನ ಜನಪರ ಹೋರಾಟಗಳಿಂದ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾದವರು ಸುಕ್ರಿ ಬೊಮ್ಮ ಗೌಡ. ಅವರನ್ನು ಏಪ್ರಿಲ್ 2ರ ಸಂಚಿಕೆಯಲ್ಲಿ ಪ್ರಸಾದ್ ಶೆಣೈ ಆರ್. ಕೆ. ಸಂದರ್ಶಿಸಿದ್ದು ಖುಷಿ ಕೊಟ್ಟಿತು.

—ಪಿ. ಜಯವಂತ ಪೈ, ಕುಂದಾಪುರ

### ನ್ಯೂಟನ್ ಕಾಲಾವಧಿ

ಏಪ್ರಿಲ್ 2ರ ಸಂಚಿಕೆಯಲ್ಲಿ ಸಿಡ್ಡಿ ಶ್ರೀನಿವಾಸ್ ಬರೆದಿರುವ 'ನ್ಯೂಟನ್ ಮನೆಯಲ್ಲಿ ಕನ್ನಡ ಪುಸ್ತಕ' ಲೇಖನದಲ್ಲಿ, ನ್ಯೂಟನ್ ಜನನ ಮತ್ತು ಕಾಲಾವಧಿ ಮೂರು ಕಡೆ ಮೂರು ಬಗೆಯಲ್ಲಿ ಉಲ್ಲೇಖಿತವಾಗಿದೆ. ಇದು ಗೊಂದಲ ಹುಟ್ಟಿಸಿತು. ಮಿಕ್ಕಂತೆ ಲೇಖನ ಸುಂದರವಾಗಿದೆ.

—ಸುಬ್ರಹ್ಮಣ್ಯ ಕಲ್ಲೂರ್

### ಸ್ಟೀಫನ್ ಹಾಕಿಂಗ್ ಬದುಕ ಚಿತ್ರ

ಮಾರ್ಚ್ 9ರ ಸಂಚಿಕೆಯಲ್ಲಿ ಗುರುರಾಜ್ ಎಸ್. ದಾವಣಗೆರೆ ಅವರು ಬರೆದ ಸ್ಟೀಫನ್ ಹಾಕಿಂಗ್ ಕುರಿತ 'ಗಾಲಿ ಕುರ್ಚಿಯ ಕಾಲಯಾನ' ಲೇಖನ ಮನಕುಲಕುವಂತಿದೆ. ಅವರ ಆತ್ಮಶಕ್ತಿ, ಆತ್ಮವಿಶ್ವಾಸ ದೊಡ್ಡದು. ಛಲವಿದ್ದರೆ ಸಾವನ್ನೂ ಗೆದಿಯಬಹುದು ಎಂದು ತೋರಿಸಿದ್ದಾರೆ. 76 ವರ್ಷ ಗಾಲಿ ಕುರ್ಚಿಯಲ್ಲಿ ಕೂತು ಪವಾಡಗಳನ್ನು ಮಾಡಿದ್ದಾರೆ. ಇವರ ಈ ವಿಜ್ಞಾನದ ಪವಾಡಗಳು ಈಗಿನ ಮಕ್ಕಳಿಗೆ ಸ್ಫೂರ್ತಿಯಾಗಲಿ. ಏಪ್ರಿಲ್ 2 ಸಂಚಿಕೆಯಲ್ಲಿ ಎಸ್. ಪ್ರಭಾವತಿ ಬರೆದಿರುವ 'ಆಹಾ, ಲಾವಾ ಗುಹೆಗಳು' ಲೇಖನ ತುಂಬಾ ಚೆನ್ನಾಗಿದೆ. ಇವೆಲ್ಲಾ ಜ್ವಾಲಾಮುಖಿಯಿಂದಾದ ಗುಹೆಗಳು. ಪ್ರಕೃತಿ ತನ್ನೆಲ್ಲಾ ರೂಪಗಳನ್ನು ಭೂಮಿಯ ಮೇಲೆ ನಿರ್ಮಿಸುತ್ತದೆ. ಜಗತ್ತಿನಲ್ಲಿರುವ ಅದ್ಭುತಗಳನ್ನೆಲ್ಲ ಈ ವಂಡರ್ ಪುಟದಲ್ಲಿ ತಿಳಿದುಕೊಳ್ಳಬಹುದು .

—ಸುಜಾತ ಬಸವರಾಜ ಕೆ. ಬೆಂಗಳೂರು

### ಅರ್ಥಪೂರ್ಣ ಲೇಖನ

ಏಪ್ರಿಲ್ 2ರ ಸಂಚಿಕೆಯ 'ನಿಮ್ಮೊಡನೆ' ಪುಟದಲ್ಲಿ ರಘುನಾಥ ಚ.ಹ. ಬರೆದ 'ಆರೋಗ್ಯ ತುರ್ತು ಪರಿಸ್ಥಿತಿ ಸಮಯವನ್ನು ಅರ್ಥಪೂರ್ಣವಾಗಿ ಎಲ್ಲರೂ ಬಳಸಿಕೊಳ್ಳೋಣ' ಬರಹ ಅರ್ಥಪೂರ್ಣವಾಗಿತ್ತು. ಕೊರೊನಾ ವೈರಸ್ ಬಗ್ಗೆ ಸಲಹೆ ಸೂಚನೆ, ನಮ್ಮ ಆರೋಗ್ಯದ ಬಗ್ಗೆ ಎಚ್ಚರಿಕೆ ಹಾಗೂ ಆರೋಗ್ಯದತ್ತ ಗಮನಹರಿಸಬೇಕಾದ ಪಾಠವನ್ನು ಹೇಳುವಂತಿತ್ತು. 'ಕೊರೊನಾ ಕಲೆ' ಚಿತ್ರಗಳು ಚೆನ್ನಾಗಿ ಮೂಡಿಬಂದಿವೆ. ಎಲ್ಲರಿಗೂ ತಿಳಿವಳಿಕೆ ನೀಡುವ ಆಟದಂತೆ ಇತ್ತು.

ಮಾರ್ಚ್ 30ರ ಸಂಚಿಕೆಯಲ್ಲಿ 'ಧ್ರುವಗಳ ನಡುವೆ ಮನುಷ್ಯನ ಹೋರಾಟ' ಎಂಬ ಶೀರ್ಷಿಕೆಯಲ್ಲಿ ಶಿವಾನಂದ ಹಿರೇಮಠ ಲೇಖನದಲ್ಲಿ, ಮನಸ್ಥಿತಿಯ ಏರುಪೇರುಗಳ ಬಗ್ಗೆ, ಅವುಗಳನ್ನು ನಿಯಂತ್ರಿಸಲು ಏನು ಮಾಡಬೇಕು ಎಂಬ ಬಗ್ಗೆ ಸವಿಸ್ತಾರ ಮಾಹಿತಿ ಕೊಟ್ಟಿದ್ದಾರೆ. ಇದು ಎಲ್ಲರಿಗೂ ಅನುಕೂಲವಾಗುವಂಥ ಲೇಖನ.

—ಬಸಪ್ಪ ಸೊ. ಮುಳ್ಳೂರ, ಹಲಗತ್ತಿ






### ಸುಬ್ರಹ್ಮಣ್ಯ ಸಂದರ್ಶನ

ಏಪ್ರಿಲ್ 2ರ ಸಂಚಿಕೆಯಲ್ಲಿ ಪ್ರಕಟವಾದ ವ್ಯಂಗ್ಯಚಿತ್ರಕಾರ ಸುಬ್ರಹ್ಮಣ್ಣ ಅವರೊಂದಿಗೆ ಸಂಕೇತ್ ಗುರುದತ್ ನಡೆಸಿದ ಸಂದರ್ಶನ 'ಅಪ್ ಟು ಡೇಟ್ ಮೇಗರವಳ್ಳಿ' ಮನಸೆಳೆಯಿತು.ಆರೋಗ್ಯ ಮೇಲ್ವಿಚಾರಕರಾಗಿ ಸೇವೆ ಸಲ್ಲಿಸುತ್ತಾ ಮೂರು ದಶಕಗಳ ಕಾಲ ವ್ಯಂಗ್ಯಚಿತ್ರಗಳನ್ನು ರಚಿಸಿ ತನ್ನದೇ ಆದ ಅಭಿಮಾನಿ ಬಳಗವನ್ನು ಗಳಿಸಿದ್ದಾರೆ. ಸಂಚಿಕೆಯಲ್ಲಿ ಪ್ರಕಟಗೊಂಡ ಚಿತ್ರಗಳು ಪ್ರಸ್ತುತ ರಾಜಕಾರಣ ಹಾಗೂ ಭ್ರಷ್ಟಾಚಾರವನ್ನು ಬಿಂಬಿಸುತ್ತವೆ. ನಿವೃತ್ತಿ ನಂತರ ಹೆಚ್ಚು ಸಮಯ ವ್ಯಂಗ್ಯಚಿತ್ರ ರಚನೆಗೆ ಮೀಸಲಿಟ್ಟು ಅಭಿಮಾನಿ ಬಳಗಕ್ಕೆ ರಸದೌತಣ ಉಣಬಡಿಸುತ್ತಾರೆಂದು ಆಶಿಸುತ್ತೇನೆ.

—ಜಿ. ನಾಗೇಂದ್ರ ಕಾವೂರು, ಮಂಗಳೂರು

### ಇನ್ನೇನು ವಿಪತ್ತು ಕಾದಿದೆಯೋ

ಏಪ್ರಿಲ್ 9ರ ಸಂಚಿಕೆಯಲ್ಲಿ ಕೇಶವ ಎಚ್. ಕೊರ್ಸೆ ಅವರು ಬರೆದ 'ಕಾನೂನಿನ ಕಣ್ಣಿಗೆ ದೂಳು; ಸಹ್ಯಾದ್ರಿ ಹತ್ತುವುದೇ ರೈಲು?' ಲೇಖನ ಸಮಯೋಚಿತವಾಗಿದೆ. ಅಂಕೋಲಾ – ಹುಬ್ಬಳ್ಳಿ ರೈಲು ಮಾರ್ಗಕ್ಕೆ ಅಂಕಿತ ಬಿದ್ದಾಗಿದೆ.

ಅಮೂಲ್ಯ, ಅಪಾರ ಅರಣ್ಯಸಂಪತ್ತನ್ನು ಈ ಯೋಜನೆಗಾಗಿ ಬಲಿಕೊಡಲು ಹೊರಟಿದ್ದೇವೆ. ಅರಣ್ಯದ ಮೇಲಿನ ದಬ್ಬಾಳಿಕೆಯ ಪರಿಣಾಮವಾಗಿ ಕಳೆದ ವರ್ಷ ಭೀಕರ ನೆರೆ ನೋಡಿದ್ದೇವೆ. ಈ ವರ್ಷ ನಮ್ಮನ್ನು ಕಾಡುತ್ತಿರುವ ಕೊರೊನಾ ಎಂಬ ಸಾಂಕ್ರಾಮಿಕವೂ ಪ್ರಕೃತಿಯನ್ನು ತಡವಲು ಹೋಗಿ ಮೈಮೇಲೆ ಎಳೆದುಕೊಂಡ ಮಾರಿಯೇ ಆಗಿದೆ. ಈಗ ಸಹ್ಯಾದ್ರಿಯ ಮೈಗೆ ಗಾಯ ಮಾಡಲು ಹೊರಟು ಇನ್ನೇನು ಅನುಭವಿಸಲಿಕ್ಕಿದೆಯೋ..

—ಆಯೇಷಾ, ಯಲ್ಲಾಪುರ



### ಅಭಿವೃದ್ಧಿ ಎಂಬ ಮರೀಚಿಕೆ

ಮಾರ್ಚ್ 26ರ 'ಸುಧಾ' ಸಂಚಿಕೆಯಲ್ಲಿ ಶಿವಾನಂದ ಕಳವೆ ಬರೆದಿರುವ 'ಮನ್ನಾ ಗೌಡನ ಮರಳ ಕಂಟ ಹಾಗೂ ಹೊಳೆಗದ್ದೆಯ ಹೆದ್ದಾರಿ ಸುಂಕ' ಲೇಖನ ಚೆನ್ನಾಗಿತ್ತು. ಅಭಿವೃದ್ಧಿಯ ಹೆಸರಿನಲ್ಲಿ ಒಂದು ಕಡೆ ಮರಳ ಕಂಟ ಮಾಯವಾಗಿ ಶೇಂಗಾ ಬೆಳೆಯುತ್ತಿದ್ದ ಜಾಗ ಚತುಷ್ಪಥ ಹೆದ್ದಾರಿಯಾಗಿ ಬದಲಾಗಿದೆ. ಇನ್ನೊಂದು ಕಡೆ ಮಳೆಗಾಲದಲ್ಲಿ ಹಳ್ಳಗಳು ತುಂಬಿ, ಹಳ್ಳಿಗಳು ಸಂಪರ್ಕ ಕಡಿದುಕೊಂಡು ಮಕ್ಕಳು ಜೀವ ಕೈಯಲ್ಲಿ ಹಿಡಿದು ತಾತ್ಕಾಲಿಕ ಸಂಕದಮೇಲೆ ಸಾಗಿ ಶಾಲೆಯನ್ನು ಸೇರುವ ಸ್ಥಿತಿ. ಎಂಥಾ ಅಭಿವೃದ್ಧಿ ಇದು?

—ಎಚ್.ಎಸ್. ಶ್ರೀಮತಿ, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in